ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರು ಲಂಬಾಣಿ ತಾಂಡಾಗಳಿಗೆ ಬೇರೆ ಕೆಲಸಕಾರ್ಯಗಳಿಗೆ ಹೋಗತಕ್ಕಂಥ ಶ್ರಮಿಕ ವರ್ಗದ ಜನರಿದ್ದಾರೆ. ಅವರ ಮಕ್ಕಳಿಗೆ ಅನುಕೂಲವನ್ನು ಒದಗಿಸಿಕೊಡಬೇಕು ಎಂದು ಅವರು ಕೇಳತಕ್ಕಂಥ ಪ್ರಶ್ನೆಯಾಗಿದೆ ಅವರುಗಳಿಗಾಗಿಯೇ ವಿಶೇಷವಾಗಿ ಆಶ್ರಮ ಶಾಲೆಗಳನ್ನು ತೆರಯತಕ್ಕಂಥ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ.

ಕೃಷಿ ಕಾರ್ಮಿಕರ ಕನಿಷ್ಠ ವೇತನ

595 - ಶ್ರೀ ಕೆ. ಸಿದ್ದಯ್ಯ (ಸಂತೇಮರನಹಳ್ಳಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ಕೃಷಿ ಕಾರ್ಮಿಕರು ಪಡೆಯುತ್ತಿರುವ ಕನಿಷ್ಠ ವೇತನ ಮತ್ತು ಆ ವೇತನವು ಯಾವ ದಿನಾಂಕದಿಂದ ಅನ್ವಯಿಸುತ್ತದೆ.

ಆ) ವೇತನಗಳನ್ನು ಪರಿಷ್ಕರಿಸಲು ನಿಗಧಿತ ಅವಧಿಯು ಇದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಕನಿಷ್ಠ ವೇತನವನ್ನು ದಿನಾಂಕ 12-7-88ರಂದು ರೂ. 12 ರಿಂದ ರೂ. 17-65ರವರೆಗೆ ವಿವಿಧ ವರ್ಗಗಳಿಗೆ ನಿಗಧಿಪಡಿಸಲಾಗಿದೆ.

ಆ) ಹೌದು

ಶ್ರೀ ಕೆ. ಸಿದ್ದಯ್ಯ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಹಳ್ಳಿಗಳ ಕಡೆ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುವಾಗ ಮಾತ್ರ ವ್ಯವಸಾಯ ಕೂಲಿಕಾರರಿಗೆ ಅಂಥ ಕೆಲಸಕಾರ್ಯ ಸಿಗತಕ್ಕಂಥ ಅವಕಾಶ ಇದೆ ಎಂದು ಹೇಳುತ್ತೀರಿ. ಇಂಥ ಅಭಿವೃದ್ಧಿ ಕಾರ್ಯಗಳಲ್ಲಿ ಈಗ ರೋಡು ಕೆಲಸ ಮಾಡುವುದು, ಸಾಯಿಲ್ ಕನಸ್ಟ್ರೇಷನ್ ಮತ್ತು ಹೂಳು ಎತ್ತತಕ್ಕಂಥ ವಿಚಾರ, ಈ ಕೆಲಸಗಳನ್ನಾದರೂ ಈ ವ್ಯವಸಾಯ ಕೂಲಿಗಾರರುಗಳಿಗೆ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ? ಏತಕ್ಕೆ ಮಾಡಬಾರದು? ಈ ರೀತಿ ಮಾಡುವುದಾದರೆ ಆ ಬಡ ಜನಗಳು ಅಪಾರವಾದ ಶೋಷಣೆಗೆ ಒಳಗಾಗಿರತಕ್ಕಂಥದ್ದು. ಅವ್ಯವಹಾರಗಳು ಆಗಿಂದಾಗ್ಗೆ ನಡೆಯುವಂಥದ್ದೆಲ್ಲ ತಪ್ಪಿ ಹೋಗುತ್ತದೆ. ಅದಲ್ಲದೆ ಈ ದಿಸೆಯಿಂದ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತದೆ, ಅದಕ್ಕೆ ತಕ್ಕ ಹಾಗೆ ಕೆಲಸವೂ ಸಹಾ ಹೆಚ್ಚಾಗಿ ಆಗತಕ್ಕಂಥ ಅವಕಾಶವಿರುವುದರಿಂದ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳಿಗೆ ತಾವು ಎನ್ಕರೇಜ್ ಮಾಡಿ ಆ ಮೂಲಕ ನೀವು ಈ ಸಣ್ಣ ಕೆಲಸಗಳನ್ನು ಅವರಿಗೆ ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಯೇ ಸ್ವಾಮಿ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆ ಲೋಕೋಪಯೋಗಿ ಸಚಿವರ ಖಾತೆಗೆ ಸಂಬಂಧಿಸಿರುವುದರಿಂದ ಮಾನ್ಯ ಸದಸ್ಯರಾದ ಶ್ರೀ ಸಿದ್ಧಯ್ಯನವರು ಏನು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಈ ಬಗ್ಗೆ ಸಚಿವರಿಗೆ ತಕ್ಕ ಕ್ರಮ ತೆಗೆದುಕೊಳ್ಳಲು ಸೂಚಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಅತಿವೃಷ್ಠಿ ಪರಿಹಾರ

499 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993ರ ಮಳೆಗಾಲದಲ್ಲಿ ಅತಿವೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 10 ಕೋಟಿ ರೂ. ನಷ್ಟವಾಗಿರುವುದು ಕಂದಾಯ ಇಲಾಖೆಯ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ನಷ್ಟಕ್ಕೆ ಒಳಗಾದವರಿಗೆ ಈವರೆಗೆ ನೀಡಲಾದ ಪರಿಹಾರದ ವಿವರಗಳೇನು?